ಮಿಸ್. ನಂ.2/2020ರಲ್ಲಿ
ಪಿ.ಡಬ್ಲ್ಯೂ-1(ಶಿವಲಿಂಗಣ್ಣ)

ದಿನಾಂಕ 20-08-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1 ಮತ್ತು 4ನೇ ಎದುರುದಾರರ ಪರ ಶ್ರೀ ಕೆ.ಎಂ.ಜೆ., ವಕೀಲರಿಂದಃ-

2ನೇ ಅರ್ಜಿದಾರರು ನನ್ನ ಮಾವನ ಮಗ. ಅವರು ನಮ್ಮ ಕುಟುಂಬಕ್ಕೆ ಸೇರಿದವರಲ್ಲ. 5ನೇ ಎದುರುದಾರರು ತೀರಿಕೊಂಡಿದ್ದಾರೆ. ಅವರು ತೀರಿಕೊಂಡು ಎಷ್ಟು ವರ್ಷಗಳಾಗಿವೆ ಎಂದು ಗೊತ್ತಿಲ್ಲ. ತಿಮ್ಮಕ್ಕನ ಮಕ್ಕಳು ಇದ್ದಾರೆ, ಅವರು ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು. 10ನೇ ಎದುರುದಾರರು ನನ್ನ ಅಣ್ಣ. ನಮ್ಮ ತಂದೆಗೆ ನಾವು ಮೂರು ಜನ ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳು. ಹೆಣ್ಣು ಮಕ್ಕಳನ್ನು ಈ ಕೇಸಿನಲ್ಲಿ ಪಾರ್ಟಿಯಾಗಿ ಮಾಡಿಲ್ಲ. 2ನೇ ಅರ್ಜಿದಾರರು ಅವರ ಪರವಾಗಿ ಸಾಕ್ಷ್ಯ ನುಡಿಯಲು ನನಗೆ ಅಧಿಕಾರ ಕೊಟ್ಟಿದ್ದಾರೆ. ವಾದಿಗಳು ತಾತನ ಆಸ್ತಿಯಲ್ಲಿ ಭಾಗ ಬರಬೇಕೆಂದು ದಾವೆ ಸಲ್ಲಿಸಿದ್ದರು.

2. 5 ರಿಂದ 10ನೇ ಎದುರುದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್.ಎಫ್.ಎ.117/2020 ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪೀಲಿನಲ್ಲಿ ನೀವು ಮತ್ತು 2ನೇ ಅರ್ಜಿದಾರರು ಪಾರ್ಟಿ ಎಂದರೆ ಸಾಕ್ಷಿಯು ನಾವು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಹೋಗಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಆರ್.ಎಫ್.ಎ.117/2020ರಲ್ಲಿ ಕಗ್ಗಲಯ್ಯ, ಮಲ್ಲೇಶ್, ಗಂಗಮಾರಯ್ಯ ರವರ ಪರವಾಗಿ ಹೆಚ್.ಜೆ., ವಕೀಲರು ಸಲ್ಲಿಸಿರುವ ವಕಾಲತ್ತನ್ನು ತೋರಿಸಿ, ಅದು 2ನೇ ಅರ್ಜಿದಾರರ ಸಹಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ವಕಾಲತ್ತನ್ನು ನಿಆರ್-2 ಎಂದು ಗುರುತಿಸಲಾಯಿತು. ಗಂಗಮಾರಯ್ಯರವರ ಸಹಿಯನ್ನು ನಿಆರ್-2(ಎ) ಎಂದು ಗುರುತಿಸಲಾಯಿತು.

3. ಮೂಲ ದಾವೆಯು ಪೆಂಡಿಂಗ್‌ನಲ್ಲಿರುವಾಗ ನನ್ನ ತಂದೆ ಬದುಕಿದ್ದರು

ಎಂದರೆ ಸರಿಯಲ್ಲ. ನನ್ನ ತಂದೆ 2014ರಲ್ಲಿ ತೀರಿಕೊಂಡರು, ತಿಂಗಳು, ದಿನಾಂಕ ಜ್ಞಾಪಕವಿಲ್ಲ. ಮೂಲ ದಾವೆಯಲ್ಲಿ ನನ್ನ ತಂದೆಯನ್ನು ಪಾರ್ಟಿಯಾಗಿ ಮಾಡಿದ್ದರು, ಆದರೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮೂಲ ದಾವೆ ಪೆಂಡಿಂಗ್‌ನಲ್ಲಿರುವಾಗ ನನ್ನ ತಂದೆಗೆ ಹುಷಾರಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಸಿದ್ದಯ್ಯ, ಶಿವಲಿಂಗಯ್ಯ, ದಾಸಯ್ಯ ಮೂರು ಜನ ಗಂಡು ಮಕ್ಕಳು. ದೇವಮ್ಮ ನನ್ನ ತಂಗಿ. ಮೂಲ ದಾವೆಯಲ್ಲಿ ನನ್ನ ಸಹೋದರರು ಹಾಗೂ ಸಹೋದರಿಗೆ ನೋಟಿಸ್ ಜಾರಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 2ನೇ ಅರ್ಜಿದಾರರಿಗೆ ಸಹ ಮೂಲ ದಾವೆಯಲ್ಲಿ ನೋಟಿಸ್ ಜಾರಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

4. ನಾನು ಮತ್ತು ನನ್ನ ಪತ್ನಿ ಒಟ್ಟಿಗೆ ವಾಸವಿದ್ದೇವೆ. ನಾನು ಯಾವಾಗಲೂ ಮನೆಯಲ್ಲಿರುವುದಿಲ್ಲ, ಜಮೀನಿನ ಕಡೆ ಹೋಗುತ್ತೇನೆ ಎಂದರೆ ಸರಿ. ನನ್ನ ಪರವಾಗಿ ನನ್ನ ಪತ್ನಿ ನ್ಯಾಯಾಲಯದಿಂದ ನೋಟಿಸನ್ನು ಸ್ವೀಕರಿಸಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ಪತ್ನಿಗೆ ನೋಟಿಸ್ ಜಾರಿಯಾಗಿಲ್ಲ ಎಂದು ಈಗ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.